# ಸಾವೇ ಉತ್ತರಿಸಬೇಕು

ನನಗೆ ತಿಳಿದಿಲ್ಲ ಎನ್ನುವ ಭಾವ ಅಜ್ಞಾನವಲ್ಲ. ಅದು ತಿಳುವಳಿಕೆಯು ಉಂಟಾಗುವ ಮುನ್ನ ಇರುವ ಭಾವಸ್ಥಿತಿ. ಜ್ಞಾನ ಪೂರ್ವ ಸ್ಥಿತಿ! ಅಥವಾ ಅರಿವನ್ನು ಬರಮಾಡಿಕೊಳ್ಳುವುದಕ್ಕೆ ತನಗೇ ತಿಳಿಯದೆ ಸಜ್ಜುಗೊಂಡ ಸ್ಥಿತಿ! ಉಪನಿಷತ್ತು ಈ ಅವಸ್ಥೆಯನ್ನು ಬಹಳ ಆದರಿಸುತ್ತದೆ. ಏಕೆಂದರೆ ತನಗೆ ತಿಳಿದಿಲ್ಲ ಎನ್ನುವ ಮನಸ್ಸು ಒಂದು ರೀತಿಯಲ್ಲಿ ತೆರೆದ ಮನಸ್ಸು. ತೆರೆದ ಮನಸ್ಸು ಯಾವುದಕ್ಕೂ ಅಂಟಿಕೊಳ್ಳದ ಮನಸ್ಸು. ಇಂಥ ಮನಸ್ಸು ಪೂರ್ವಾಗ್ರಹ ರಹಿತವಾಗಿರುವುದಾಗಿ ಎಲ್ಲವನ್ನೂ ಶೋಧನೆ ಮಾಡಬಲ್ಲ ಯೋಗ್ಯತೆಯುಳ್ಳ ಮನಸ್ಸೂ ಆಗಿದೆ. ಸತ್ಯವು ಶೋಧಿಸಿ ತಿಳಿಯಬೇಕಾದ ತತ್ವ ಎಂದು ಉಪನಿಷತ್ತು ಬಲ್ಲದು. ಸತ್ಯವು ಶುದ್ಧವಾದದ್ದು. ಶುದ್ಧ ಎಂದರೆ ಶೋಧಿಸಲ್ಪಟ್ಟದ್ದು ಎಂದೇ ಅರ್ಥ. ಇದಕ್ಕೆ ಪ್ರತಿಯಾಗಿ ಅ–ಶುದ್ಧ ಎಂದರೆ ಕಲಬೆರಕೆಯಾದದ್ದು ಎಂದು. ಸತ್ಯವನ್ನು ತಿಳಿಯುವುದೇ ಈ ಬದುಕಿನ ಉದ್ದೇಶ ಎಂದು ಉಪನಿಷತ್ತು ಅರಿತಿದೆಯಾಗಿ, ಆಗ ಬದುಕೇ ಶುದ್ಧವಾಗುತ್ತದೆ ಎಂದೂ ಗೊತ್ತು ಮಾಡಿಕೊಂಡಿದೆಯಾಗಿ ಶೋಧನೆ ಮಾಡಬಲ್ಲ ಯೋಗ್ಯತೆಯ ಮನಸ್ಸುಗಳನ್ನು ಉಪನಿಷತ್ತು ಹುಡುಕುತ್ತಿದೆ ಎಂದರೂ ಹೆಚ್ಚಲ್ಲ.

ನಚಿಕೇತನು ಯಮಧರ್ಮನ ಮುಂದೆ ನಿಂತಿದ್ದ. ಅಂದರೆ ಸಾವಿನ ಮುಂದೆ ನಿಂತಿದ್ದ. ಸಾಮಾನ್ಯವಾಗಿ ಲೋಕ, ಸಾವಿನ ಕುರಿತಾದ ಕಾಲ್ಪನಿಕವಾದ ಭಯದಿಂದ ತತ್ತರಿಸುತ್ತಿದೆ. ಭಯಗ್ರಸ್ತವಾದ ಮನಸ್ಸು– ಮುಚ್ಚಿಕೊಂಡ ಮನಸ್ಸು. ಅದು ತೆರೆದ ಮನಸ್ಸಾಗಿರುವುದು ಸಾಧ್ಯವಿಲ್ಲ. ಆದರೆ ಕಲ್ಪನೆ ಬೇರೆ ಅನುಭವ ಬೇರೆಯೇ ಇರುತ್ತದೆ. ಅನುಭವದಲ್ಲಿ ಭಯವಿರಲಾರದು. ಆದುದರಿಂದಲೇ ಭಯವಿದ್ದಲ್ಲಿ ಭಯದ ಪರಿಣಾಮಗಳು ಇರುತ್ತವೆಯೇ ವಿನಾ ನಿಜವಾದ ಅನುಭವವಿರಲಾರದು. ನಚಿಕೇತನು ಸಾವಿನ ನಿಜದ ಮುಂದೆ ನಿಂತಿದ್ದ. ಬದುಕಿನ ಇನ್ನೊಂದು ಮಗ್ಗುಲಾಗಿ, ಇನ್ನೊಂದು ತಿರುವಾಗಿ, ಇನ್ನೊಂದು ಬಾಗಿಲಾಗಿ ಸಾವನ್ನು ನಚಿಕೇತನು ಕಾಣುತ್ತಿದ್ದ. ಹೌದು. ಸಾವೆಂದರೆ ಅದೊಂದು ಬಾಗಿಲು. ಸಾವಿನ ಅನುಭವವೆಂದರೆ ಈ ಬಾಗಿಲನ್ನು ಹಾದು ಹೋಗುವ ಅನುಭವ. ಆದುದರಿಂದಲೇ ಅವರು– ಸತ್ತರಂತೆ ಎನ್ನುವ ಸುದ್ದಿಯನ್ನು ಅವರು– ಹೊರಟು ಹೋದರು ಎನ್ನುವ ಪಯಣದ ಪರಿಭಾಷೆಯಲ್ಲಿಯೇ ಲೋಕ ಆಡುತ್ತದೆ! ಸಾವಿನ ಬಾಗಿಲಿನ ದ್ವಾರಪಾಲಕನಂತೆ ಯಮಧರ್ಮನಿದ್ದಾನೆ. ಅವನು ನಚಿಕೇತನ ಮುಗ್ಧತೆಯನ್ನೂ ನಿರಾಳತೆಯನ್ನೂ ತೆರೆದ ಮನಸ್ಸನ್ನೂ ಮೆಚ್ಚಿದ್ದಾನೆ. ಸಾವಿಗೆ ಭಯಭೀತವಾದ ಮನಸ್ಸುಗಳ ಜೊತೆ ಯಮಧರ್ಮನಿಗೆ ಹೆಚ್ಚೇನೂ ಕೆಲಸವೇ ಇರುವುದಿಲ್ಲ! ಏಕೆಂದರೆ ಭಯದಿಂದ ಜಡಗೊಂಡ ಮನಸ್ಸು ಯಾವುದನ್ನೂ ಅನುಭವಿಸಲಾರದು. ಬದುಕಿಯೂ ಸತ್ತಂತೆ ಎಂಬ ಮಾತಿದೆ ಲೋಕದಲ್ಲಿ. ಅಂಥ ಸ್ಥಿತಿ ಭಯಗ್ರಸ್ತರದು. ಈ ಮಾತಿಗೆ, ಬದುಕಿಯೂ ಸತ್ತಂತೆ ಎಂಬ ಮಾತಿಗೆ ಪ್ರತಿಮಾತೂ ಒಂದು ಇರಬಹುದಲ್ಲವೆ? ಈ ಪ್ರತಿ ಮಾತು ಸತ್ತೂ– ಬದುಕಿದಂತೆ ಎಂದೇ ಇರಬಹುದಲ್ಲವೆ? ಸಾವಿನ ಬಾಗಿಲಿನ ದ್ವಾರಪಾಲಕನಂತಿರುವ ಯಮಧರ್ಮ, ಬದುಕಿಯೂ ಸತ್ತಂತಿರುವ ಭಯಭೀತ ಜೀವರನ್ನು ಅನಾದಿಯಿಂದ ನೋಡುತ್ತಿದ್ದಾನೆ. ಸತ್ತೂ ಬದುಕಿದಂತಿರುವ ಜೀವಗಳನ್ನು ಕಂಡದ್ದು ಮಾತ್ರ ವಿರಳಾತಿವಿರಳ. ಈಗ ನಚಿಕೇತ, ಸಾವಿನ ಬಾಗಿಲ ಬಳಿ, ಯಮಧರ್ಮನ ಮುಂದೆ ನಿಂತಿದ್ದಾನೆ!

ಹುಡುಗನನ್ನು ಮೆಚ್ಚಿ, ಯಮಧರ್ಮ, ಮೂರು ವರಗಳನ್ನು ನೀಡಿದ್ದ. ತನ್ನ ಅರಿವಿಗಾಗಿಯೇ ಈ ವರಗಳನ್ನು ನಚಿಕೇತ ಬಳಸಿದ್ದ. ಈಗ ಮೂರನೆಯ ವರವಾಗಿ ಸಾವಿನ ಆಚೆಗೆ ಏನಿದೆ? ಏನಾದರೂ ಇದೆಯೇನು? ಅಥವಾ ಏನೂ ಇಲ್ಲವೇನು? ಎಲ್ಲವೂ ಸಾವಿನಲ್ಲಿ ಮುಗಿತಾಯಗೊಳ್ಳುತ್ತದೆಯೇನು? ಸಾವೇ – ಕೊನೆಯ ನಿಲುಗಡೆ ಏನು? ಏನಿದೆಲ್ಲದರ ಅರ್ಥ? ನೀನೇ ಹೇಳಬೇಕು ಎಂದು ನಚಿಕೇತ, ತನಗೆ ತಿಳಿದಿರದ ನಿಜವನ್ನು ತನ್ನೊಳಗೆ ಬರಮಾಡಿಕೊಳ್ಳಬಲ್ಲ ತೆರೆದ ಮನದಿಂದ ಕೇಳಿದ್ದಾನೆ. ಈ ಪ್ರಶ್ನೆಗೆ ಯಮನಂಥ ಯಮನೂ ಚಕಿತನಾದನಂತೆ. ಇದು ಬಾಗಿಲನ್ನು ದಾಟಿ ಹೋಗುವ ಪ್ರಶ್ನೆ ಮಾತ್ರವಲ್ಲ. ಬಾಗಿಲನ್ನೇ ಹೊತ್ತೊಯ್ಯುವ ಪ್ರಶ್ನೆಯಾಗಿದೆ. ಮನೆಯ ಪರಿಚಯವಾಯಿತು, ಇನ್ನು ಬಯಲನ್ನು ಪರಿಚಯಮಾಡಿಕೊಡು ಎಂದು ಕೇಳುತ್ತ ತನ್ನನ್ನೇ ಬಯಲಾಗಿಸುವ ಪ್ರಶ್ನೆಯಾಗಿದೆ. ಯಮಧರ್ಮನು ಕ್ಷಣ ಯೋಚಿಸಿದನಂತೆ. ಹುಡುಗನು, ಸತ್ಯದ ಶುದ್ಧ ರೂಪವನ್ನು ಬಯಸುತ್ತಿದ್ದಾನೆ. ಈ ಬಯಕೆಯನ್ನು ಧಾರಣ ಮಾಡಿಕೊಳ್ಳುವ ಅಂತಃಶಕ್ತಿ ಹುಡುಗನಿಗೆ ಎಷ್ಟು ಆಳದಲ್ಲಿದೆ ಎಂದು ತಾನೂ ಕೂಡ ಪರೀಕ್ಷಿಸಬೇಕಿದೆ. ಹುಡುಗ ನನ್ನನ್ನು ತನ್ನ ಅರಿವಿಲ್ಲದೆ ಶೋಧಿಸುತ್ತಿದ್ದಾನೆ; ತಾನೂ ಅವನನ್ನು ಶೋಧಿಸಬೇಕಾಗಿದೆ.

ಯಮನು ಹೇಳಿದನಂತೆ: ಹುಡುಗಾ, ಈ ಪ್ರಶ್ನೆಯನ್ನು ಕೈಬಿಡು. ಕೈಬಿಡಬೇಕೆನ್ನಲು ಮೊದಲ ಕಾರಣವೆಂದರೆ– ಬಹುಕಾಲದಿಂದ ಇಂಥ ಪ್ರಶ್ನೆಗಳ ಕುರಿತು ದೊಡ್ಡ ಮೇಧಾವಿಗಳೆನಿಸಿಕೊಂಡವರೆಲ್ಲ ಚಿಂತಿಸಿದ್ದಾರೆ. ಯಾರಿಗೂ ಇದು ಹೀಗೆ ಎಂದು ಖಚಿತವಾಗಿ ಹೇಳಲು ಬಂದಿಲ್ಲ. ನ ಹಿ ಸುವಿಜ್ಞೇಯಂ ಅದು ಇದಮಿತ್ಥಂ ಎಂದು ತಿಳಿದು ಬರುವಂಥದೇ ಅಲ್ಲ. ಅದಕ್ಕೆ ಖಚಿತ ರೂಪವೇ ಇಲ್ಲ. ಆದುದರಿಂದಲೇ ಅತ್ಯಂತ ಸೂಕ್ಷ್ಮವಾದುದಾಗಿರಬಹುದು ಅದು ಎನ್ನಲಾಗಿದೆ. ಅಣುರೇಷ ಧರ್ಮಃ. ಹೀಗಿರಲಾಗಿ, ಸರಿಯಾಗಿ ಸ್ಪಷ್ಟವಾಗಿ ತಿಳುವಳಿಕೆಗೆ ಬರಲಾರದೆಂದ ಮೇಲೆ ಇಂಥ ವಿಚಾರಗಳ ಕುರಿತು ಚಿಂತಿಸುವುದಾದರೂ ಏಕೆ? ಸ್ಪಷ್ಟವಾಗಿ ನಮ್ಮ ತಿಳುವಳಿಕೆಗೆ ಒದಗಿ ಬರುವ ಈ ಲೋಕದ ಅನುಭವಗಳೇ, ಇಂಥ ಅಮೂರ್ತ ಸೂಕ್ಷ್ಮ ವಿಚಾರಗಳಿಗಿಂತ ಮುಖ್ಯವಲ್ಲವೆ? ಯೋಚಿಸಿ ನೋಡು.

ನಚಿಕೇತನಿಗೆ ನಗು ಬಂತು. ದೊಡ್ಡ ಮೇಧಾವಿಗಳೆಲ್ಲ ಈ ಕುರಿತು ಚಿಂತಿಸಿದ ಇತಿಹಾಸವೇ ಇದೆಯೆ? ಹಾಗಾದರೆ ಈ ಪ್ರಶ್ನೆ ತುಂಬ ಮುಖ್ಯವಾದದ್ದು, ನಿಜಕ್ಕೂ ಅರ್ಥಪೂರ್ಣವಾದದ್ದು ಎಂದೇ ಆಯಿತಲ್ಲ! ಆ ಚಿಂತನೆಯ ಇತಿಹಾಸವನ್ನು ನಾನು ಮುಂದುವರಿಸುತ್ತಿರುವೆನೆಂದೇ ನೀನು ಹೇಳಿದಂತಾಯಿತು. ಸತ್ಯವು ಖಚಿತ ಸ್ವರೂಪದಲ್ಲಿ ಇಲ್ಲವೆನ್ನುವೆ ನೀನು. ಅದು ತಿಳಿದು ಬರುವ ಮೊದಲೇ, ಅದು ಹೀಗೆ ಇರಬೇಕೆಂದು ನಾವೇಕೆ ನಿರ್ಧರಿಸಹೋಗಬೇಕು? ನಮ್ಮ ಮನಸ್ಸಿಗಾದರೂ ಖಚಿತ ರೂಪವಿದೆಯೆ? ನಮ್ಮ ದೇಹ ಮನಸ್ಸುಗಳು ಬದಲಾಗುತ್ತ ನಡೆದಿವೆ ಎನ್ನುವುದೇ ಬದುಕಿನ ಒಂದು ನಿಜವಲ್ಲವೆ? ಓಹೋ– ಸಾವೆನ್ನುವುದು ಮಾತ್ರ ಖಚಿತ! ಇದನ್ನೊಪ್ಪಿದರೆ, ಬದುಕೇ, ಸಾವಿನಷ್ಟು ಖಚಿತವಲ್ಲ ಎಂದಂತಾಯಿತು.

ಆದುದರಿಂದ, ಕೇಳುವುದಿದ್ದರೆ, ನಿನ್ನಲ್ಲೇ ಕೇಳಬೇಕು ನಾನು. ಬದುಕಿನಲ್ಲಿ ಹುಟ್ಟಿಕೊಂಡ ಪ್ರಶ್ನೆಗಳನ್ನು ಸಾವಿನಲ್ಲೇ ಕೇಳಬೇಕು. ಬದುಕುವ ಆಸೆ ಇದ್ದವರಲ್ಲಿ ಯಾರಲ್ಲೂ ಅಲ್ಲ. ನಿನ್ನಂತೆ ಹೇಳಬಲ್ಲವನು ಬೇರೆ ಯಾರೂ ನನಗೆ ಸಿಗಲಾರ. ವಕ್ತಾ ಚಾಸ್ಯ ತ್ವಾದೃಗನ್ಯೋ ನಲಭ್ಯಃ ನಿನ್ನಂತೆ ಹೇಳಬಲ್ಲವನು ಇನ್ನೊಬ್ಬನಿಲ್ಲ. ಇದು ಖಚಿತ. ಇದರ ಜೊತೆಗೆ ನಿನ್ನಲ್ಲಿ ಕೇಳಬೇಕಾದುದರಲ್ಲಿ ಈ ಪ್ರಶ್ನೆಗಿಂತ ಮುಖ್ಯವಾದುದೂ ಕೂಡ ಬೇರೆ ಇನ್ನೊಂದಿಲ್ಲ ಅದೀಗ ತಿಳಿದು ಬಿಟ್ಟಿತು ಎಂದನಂತೆ. ದೊಡ್ಡವರ ಗುಟ್ಟು ಮಕ್ಕಳಿಗೆ ಬಹಳಬೇಗ ತಿಳಿದು ಬಿಡುತ್ತದೆ!

■ **ತೋಷ**

## ಮಾತೇ ಮುತ್ತು

★ ಆತ್ಮವಿಶ್ವಾಸ ಹುಟ್ಟುವುದು ಯಾವಾಗಲೂ ಸರಿ ಇರುತ್ತೇವೆ ಎನ್ನುವುದರಿಂದ ಅಲ್ಲ; ಬದಲಾಗಿ ತಪ್ಪು ಖಂಡಿತಾ ಆಗಿಲ್ಲ ಎನ್ನುವ ಧೈರ್ಯದಿಂದ.
–ಪೀಟರ್ ಮೆಕ್ಕಿಂಟೇರ್

★ ಎಲ್ಲರೂ ಸತ್ತಿದ್ದಾರೆ, ನೀವೂ ಸಾಯಲಿದ್ದೀರಿ. ಜ್ಞಾನಿಗಳ ಉಪದೇಶವಷ್ಟೇ ಉಳಿದುಕೊಳ್ಳುತ್ತದೆ.
–ಸಂತ ಕಬೀರ

★ ಆಶಾವಾದ ಎನ್ನುವ ನಂಬಿಕೆಯೇ ಸಾಧನೆಗೆ ದಾರಿ ತೋರಿಸುತ್ತದೆ.
ಹೆಲೆನ್ ಕೆಲ್ಲರ್

★ ಮಹಿಳೆಯಾಗಿ ಯುದ್ಧ ಗೆಲ್ಲಬೇಕೆಂದರೆ ಒಂದಕ್ಕಿಂತ ಹೆಚ್ಚು ಸಲ ಯುದ್ಧ ಮಾಡಬೇಕಾಗಬಹುದು.
–ಮಾರ್ಗರೆಟ್ ಥ್ಯಾಚರ್

★ ಉತ್ತಮ ಶಿಕ್ಷಕ ಭರವಸೆಗೆ ಸ್ಫೂರ್ತಿ ತುಂಬುತ್ತಾನೆ, ಕಲ್ಪನೆಗಳನ್ನು ಉದ್ದೀಪಿಸುತ್ತಾನೆ, ಕಲಿಕೆಯಲ್ಲಿ ಪ್ರೀತಿ ಹುಟ್ಟಿಸುತ್ತಾನೆ.
ಬ್ರಾಡ್ ಹೆನ್ರಿ

★ ಎಲ್ಲ ಕೆಲಸಗಳನ್ನೂ ಎಚ್ಚರಿಕೆಯಿಂದ ನಿರ್ವಹಿಸಿ– ಆದರೆ ತುಂಬು ಶ್ರದ್ಧೆಯೊಂದಿಗೆ.
–ವೇದವ್ಯಾಸ

★ ಬಯಸುವುದೆಂದರೆ ದುಃಖವನ್ನು ಆಹ್ವಾನಿಸುವುದು. ಏನನ್ನೂ ಬಯಸದೆ ಇರುವುದು ಸಂತೋಷ ತರುವುದು.
–ಬೋಧಿಧರ್ಮ

★ ನಿಮ್ಮ ನಿರ್ಧಾರಗಳಿಗೆ ಬದ್ಧರಾಗಿರಿ. ಆದರೆ ಧೋರಣೆಯಲ್ಲಿ ಬದಲಾವಣೆಗಳಿಗೆ ಸಿದ್ಧರಾಗಿ.
–ಟಾಮ್ ರಾಬಿನ್ಸ್